**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ,**
**ಮೂಡಿಗೆರೆ**
**ಸಿ.ಸಿ.1717/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಡಾ.ಚಂದ್ರಶೇಖರ್ ಜೆ.ಪಿ. | ಪ್ರಾಸಾ-5 |
| ತಂದೆಯ ಹೆಸರು | : ಪುಟ್ಟಪ್ಪ | ಚಾಸಾ-14 |
| ವಯಸ್ಸು | : 50 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಹಿರಿಯ ತಜ್ಞರು | ದಿನಾಂಕಃ 29.01.2026. |
| ವಾಸಸ್ಥಳ | : ಮೂಡಿಗೆರೆ ಸರ್ಕಾರಿ ಆಸ್ಪತ್ರೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ದಿ.13.04.2022 ರಿಂದ ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಹಿರಿಯ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.03.04.2024 ರಂದು ಸ.5.30 ರ ಸಮಯಕ್ಕೆ ಕರ್ತವ್ಯದಲ್ಲಿ ಇದ್ದಾಗ ಆರೋಪಿಯನ್ನು ಅಪಘಾತದ ಹಿನ್ನಲೆಯಲ್ಲಿ ಚಿಕಿತ್ಸೆಗೆಂದು ಹಾಜರಾಗಿದ್ದು ನಾನು ಅವರನ್ನು ಪರೀಕ್ಷಿಸಿದಾಗ ಅವರ ಮುಖದ ಬಲಭಾಗದಲ್ಲಿ 1*1 ಇಂಚಿನ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ, ಬಲಭಾಗದ ಕಣ್ಣು ಕೆಂಪಾಗಿರುತ್ತದೆ ಸದರಿ ಗಾಯವು ಸಾಮಾನ್ಯ ಸ್ವರೂಪದ್ದಾಗಿರುತ್ತದೆ. ನಂತರ ಅವರಿಗೆ ಚಿಕಿತ್ಸೆ ನೀಡಿರುತ್ತೇನೆ.

ಸಾಕ್ಷಿಗೆ ದಿ.10.06.2024 ರಂದು ನೀಡಿದ ಗಾಯದ ಪ್ರಮಾಣ ಪತ್ರ ಮತ್ತು ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ-15 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ**

ಆರೋಪಿಯು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗೆ ಬಂದ ಸಮಯದಲ್ಲಿ ಸರ್ಕಾರಿ ಬಸ್ ತಮ್ಮ ಲಾರಿಗೆ ಡಿಕ್ಕಿ ಹೊಡೆದಿತ್ತು ಎಂದು ತಿಳಿಸಿರುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತಹ ಗಾಯಗಳು ಸಾಮಾನ್ಯವಾಗಿ ಸರ್ಕಾರಿ ಬಸ್ ವೇಗವಾಗಿ ಮತ್ತು ನಿರ್ಲಕ್ಷತನದಿಂದ ಚಲಿಸಿ ಅಪಘಾತಪಡಿಸಿದಾಗ ಸಂಭವಿಸುತ್ತದೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ,</u>**
**<u>ಮೂಡಿಗೆರೆ</u>**
**<u>ಸಿ.ಸಿ.1717/2024</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಸುಬ್ಬೇಗೌಡ | ಪ್ರಾಸಾ-6 |
| ತಂದೆಯ ಹೆಸರು | : ತಿಮ್ಮೇಗೌಡ | ಚಾಸಾ-12 |
| ವಯಸ್ಸು | : 42 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಬಸ್ ನಿರ್ವಾಹಕ | ದಿನಾಂಕಃ 29.01.2026 |
| ವಾಸಸ್ಥಳ | : ಅರಕಲಗೂಡು | |

**<u>:ಮುಖ್ಯ ವಿಚಾರಣೆ: ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ಆರೋಪಿಯು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. ಚಾಸಾ-1 ರವರ ಪರಿಚಯ ನನಗಿದೆ.

ದಿ.23.04.2024 ರಂದು ಸ.4.30 ಸಮಯದಲ್ಲಿ ಮೂಡಿರೆಗೆಯಿಂದ ಸಕಲೇಶಪುರಕ್ಕೆ KA-18-F-654 ರ ಸರ್ಕಾರಿ ಬಸ್ ನಲ್ಲಿ ಹೋಗುವಾಗ ಹರೀಶ್ ಪಿ.ಯು ಕಾಲೇಜ್ ನ ಬಳಿ ಎದುರಿನಿಂದ ಒಂದು ಲಾರಿಯು ಅತಿವೇಗ ಮತ್ತು ನಿರ್ಲಕ್ಷ್ಯತನದಿಂದ ಬಂದು ನಾವು ಹೋಗುತ್ತಿದ್ದ ಬಸ್ ನ ಹಿಂಬಾಗದ ಬಲ ಭಾಗಕ್ಕೆ ಡಿಕ್ಕಿ ಪಡೆಸಿರುತ್ತದೆ. ಸದರಿ ಅಪಘಾತದಿಂದ ನಮ್ಮ ಬಸ್ ನಲ್ಲಿ ಒಬ್ಬ ಹುಡುಗನಿಗೆ ಬಲ ಭಾಗದ ಕುತ್ತಿಗೆಗೆ ಮತ್ತು ಕೈಗೆ ಪೆಟ್ಟಾಗಿರುತ್ತದೆ. ನಂತರ ಆಂಬ್ಯುಲೆನ್ಸ್ ಗೆ ಕರೆ ಮಾಡಲಾಗಿ ಆ ಹುಡುಗನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿರುತ್ತದೆ. ಆ ಹುಡುಗನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವ ಮಾರ್ಗದಲ್ಲಿ ಮೃತ ಪಟ್ಟಿರುತ್ತಾನೆ ಎಂದು ಇತರರಿಂದ ಮಾಹಿತಿ ಬಂದಿರುತ್ತದೆ. ನಾನು ಹೋಗುತ್ತಿದ್ದ ಬಸ್ ಗೆ ಡಿಕ್ಕಿ ಪಡಿಸಿದ ಲಾರಿಯ ಸಂಖ್ಯೆ ನನಗೆ ನೆನಪಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ನಮ್ಮ ಬಸ್ ಗೆ ಡಿಕ್ಕಿ ಪಡಿಸಿದ ವಾಹನದ ಸಂಖ್ಯೆ KA-18-D-7272 ಆಗಿರುತ್ತದೆ ಎಂದರೆ ಸರಿ. ಸದರಿ ಅಪಘಾತದಲ್ಲಿ ಮೃತ ಪಟ್ಟ ಹುಡುಗನ ಹೆಸರು ರಜಿತ್ ಮೊದಲಿಗೆ ಅವನನ್ನು ಮೂಡಿಗೆರೆ ಆಸ್ಪತ್ರೆಗೆ ಕರೆದುಕೊಂಡು ಬಂದು ನಂತರ ಹೆಚ್ಚಿನ ಚಿಕಿತ್ಸೆಗೆ ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಗೆ ಕಳುಹಿಸಲಾಗಿ ಸದರಿ ಆಸ್ಪತ್ರೆಯಲ್ಲಿ ಆತನು ಮೃತ ಪಟ್ಟಿರುತ್ತಾನೆ ಎಂದರೆ ಸರಿ. ನಮ್ಮ ಬಸ್ ಗೆ ಡಿಕ್ಕಿ ಹೊಡೆದ ಲಾರಿ ಚಾಲಕನ ಅತಿವೇಗ ಮತ್ತು ಅಜಾಗ್ರುಕತೆಯಿಂದ ಸದರಿ ರಜಿತ್ ರವರ ಮರಣವು ಸಂಭವಿಸಿರುತ್ತದೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ**

ದಿ.23.04.2024 ರಂದು ಮೂಡಿಗೆರೆ ಬಸ್ ನಿಲ್ದಾಣದಿಂದ ಸ.4.30 ರ ಸಮಯಕ್ಕೆ ಹೊರಟಿರುತ್ತೇವೆ. ಹರೀಶ್ ಕಾಲೇಜ್ ಬಳಿ ರಸ್ತೆಯು ಕಿರಿದಾಗಿರುತ್ತದೆ ಎಂದರೆ ಸರಿ. ಬಸ್ ನಲಿ ಪ್ರಯಾಣಿಸುತ್ತಿರುವಾಗ ಮೃತ ಪಟ್ಟ ರಜಿತ್ ನ್ನು ತನ್ನ ಕೈಯನ್ನು ಹೊರ ಹಾಕಿ ಕುಳಿತಿರುತ್ತಾನೆ. ನಾನು ಅದನ್ನು ಪ್ರಯಾಣಿಸುವ ಸಮಯದಲ್ಲಿ ಗಮನಿಸಿರುವುದಿಲ್ಲ. ಸದರಿ ಸಮಯದಲ್ಲಿ ಪ್ರಯಾಣಿಕರು ಹೆಚ್ಚಿಗೆ ಇದ್ದ ಕಾರಣ ಅವರಿಗೆ ಟಿಕೆಟ್ ನ್ನು ವಿತರಿಸುತ್ತಿದ್ದೆ. ಆದ ಕಾರಣ ಎದುರಿನಿಂದ ಬಂದ ಲಾರಿಯ ವೇಗ ಬಗ್ಗೆ ನಾನು ಗಮನಿಸಿರುವುದಿಲ್ಲ. ಹಾಗೆಯೇ ಸದರಿ ಲಾರಿಯನ್ನು ಯಾರು ಚಲಾಯಿಸುತ್ತಿದ್ದರು ಎಂದು ನಾನು ಗಮನಿಸಿರವುದಿಲ್ಲ. ಅಪಘಾತ ಸಂಭವಿಸಿದ ಸಮಯದಲಿ ನಾನು ಪ್ರಯಾಣಿಕರಿಗೆ ಟಿಕೆಟ್ ಅನ್ನು ವಿತರಿಸುತ್ತಿದ್ದ ಕಾರಣ ಅಪಘಾತ ಸಂಭವಿಸಿದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನಾನು ಮತ್ತು ಚಾಸಾ-1 ರವರು ಒಂದೇ ಡಿಪೋಗೆ ಸೇರಿದವರಾಗಿರುತ್ತೇವೆ ಎಂದರೆ ಸರಿ. ಆದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.